Phone: 91- 080-23330984
91- 080-23330149

NAAC A+ Accredited

Website: www.uasbangalore.edu.in
Email: registrar@uasbangalore.edu.in

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕುಲಸಚಿವರ ಕಛೇರಿ, ನಾಯಕ್ ಭವನ, ಗಾಕೃವಿಕೆ, ಬೆಂಗಳೂರು

**UNIVERSITY OF AGRICULTURAL SCIENCES, BANGALORE**

**Office of the Registrar, GKVK, Bengaluru-560065**

ಸಂಖ್ಯೆ:ಕು.ಸ/ಸಕು/ಹಿ.ಕ್ಷೇ.ಸ/ದೂ.ಶಿ.ಘ/ಸಾವಯವ ಕೃಷಿ/2026-27 ದಿನಾಂಕ:06.07.2026

## ಅಧಿಸೂಚನೆ

ವಿಷಯ: 2026-27ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ವಿಸ್ತರಣಾ ನಿರ್ದೇಶನಾಲಯದ ದೂರ ಶಿಕ್ಷಣ ಘಟಕದ ಅಡಿಯಲ್ಲಿ ನಡೆಸುವ **"ಸಾವಯವ ಮತ್ತು ನೈಸರ್ಗಿಕ ಕೃಷಿ"** ಎರಡು ವರ್ಷದ ಡಿಪ್ಲೋಮಾ ಕೋರ್ಸ್‌ಗೆ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ:
1. ಸಂಖ್ಯೆ:ಕು.ಸ/ಸಕು/ಹಿ.ಕ್ಷೇ.ಸ/ದೂ.ಶಿ.ಘ/ಸಾವಯವ ಕೃಷಿ-ಕೋರ್ಸ್/2025-26 ದಿನಾಂಕ: 12.05.2026
2. ವಿಸ್ತರಣಾ ನಿರ್ದೇಶಕರು, ಕೃವಿವಿ, ಬೆಂಗಳೂರು ಇವರ ಪ್ರಸ್ತಾವನೆ ಪತ್ರದ ಸಂಖ್ಯೆ: ದೂ.ಶಿ.ಘ/ಅರ್ಜಿಆಹ್ವಾನ/2026-27/291 ದಿನಾಂಕ:30.06.2026.
3. ಶಿಕ್ಷಣ ನಿರ್ದೇಶಕರು ಹಾಗೂ ಮಾನ್ಯ ಕುಲಪತಿಗಳು, ಕೃವಿವಿ, ಬೆಂಗಳೂರು ಇವರ ಅನುಮೋದನೆ ದಿನಾಂಕ:06.07.2026

### ದೂರ ಶಿಕ್ಷಣ ಕೋರ್ಸ್‌ಗಳ ವಿವರ

| ಕ್ರಮ ಸಂ. | ಕೋರ್ಸ್‌ಗಳು | ಕೋರ್ಸ್‌ಗಳ ಅವಧಿ | ಅರ್ಜಿ ಶುಲ್ಕ (ರೂ.) | ಕೋರ್ಸ್ ಶುಲ್ಕ (ರೂ.) | ಅರ್ಜಿ ದೊರೆಯುವ ವಿಳಾಸ | ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ವಿಳಾಸ | ವಿದ್ಯಾರ್ಹತೆ | ಬೋಧನಾ ಮಾಧ್ಯಮ |
|---|---|---|---|---|---|---|---|---|
| 1. | ಸಾವಯವ ಮತ್ತು ನೈಸರ್ಗಿಕ ಕೃಷಿ | ಎರಡು ವರ್ಷ (4 ಸೆಮಿಸ್ಟರ್‌ಗಳು) | 100/- | 24,000/- | ದೂರ ಶಿಕ್ಷಣ ಘಟಕ ವಿಸ್ತರಣಾ ನಿರ್ದೇಶನಾಲಯ ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ, ಬೆಂಗಳೂರು-560065/ ಕೃವಿವಿ, ಬೆಂಗಳೂರಿನ ಅಂತರ್ಜಾಲ | ದೂರ ಶಿಕ್ಷಣ ಘಟಕ ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ ಜಿಕೆವಿಕೆ, ಬೆಂಗಳೂರು-560065 | ಎಸ್.ಎಸ್.ಎಲ್.ಸಿ ಉತ್ತೀರ್ಣ / ಅನುತ್ತೀರ್ಣರಾಗಿರಬೇಕು | ಕನ್ನಡ |

ನಿಗದಿತ ಅರ್ಜಿ ಶುಲ್ಕವನ್ನು ಡಿ.ಡಿ.ಮೂಲಕ **COMPTROLLER, UAS, GKVK, BENGALURU** ಇವರ ಹೆಸರಿನಲ್ಲಿ ಪಡೆಯತಕ್ಕದ್ದು. ಅರ್ಜಿಗಳನ್ನು ಮೇಲೆ ತಿಳಿಸಿದ ವಿಳಾಸದಲ್ಲಿ **ದಿನಾಂಕ:06.07.2026 ರಿಂದ 07.08.2026** ರವರೆಗೆ ಪಡೆಯಬಹುದು ಅಥವಾ ಕೃವಿವಿ, ಬೆಂಗಳೂರಿನ ವೆಬ್‌ಸೈಟ್‌ನಲ್ಲಿಯು ಡೌನ್‌ಲೋಡ್ ಮಾಡಿಕೊಳ್ಳಬಹುದು. ಭರ್ತಿ ಮಾಡಿದ ಅರ್ಜಿಗಳನ್ನು **ದಿನಾಂಕ:07.08.2026 (ಸಂಜೆ 4.00 ರ ಒಳಗೆ) ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು-560065** ರವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸತಕ್ಕದ್ದು. ಹೆಚ್ಚಿನ ವಿವರಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವೆಬ್‌ಸೈಟ್ www.uasbangalore.edu.in ನಲ್ಲಿ ಪಡೆಯಬಹುದು ಅಥವಾ ದೂರವಾಣಿ ಸಂಖ್ಯೆ: 080-23636353 ಸಂಪರ್ಕಿಸತಕ್ಕದ್ದು.

ಕೃವಿವಿ, ಜಿ.ಕೆ.ವಿ.ಕೆ ★ ಕುಲಸಚಿವರು ★ ಬೆಂಗಳೂರು - 560 065.

ಆದೇಶದ ಮೇರೆಗೆ,

ಕುಲಸಚಿವರು

ಪ್ರತಿಗಳು:

1. ಶಿಕ್ಷಣ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು – ಮಾಹಿತಿಗಾಗಿ.
2. ವಿಸ್ತರಣಾ ನಿರ್ದೇಶಕರು, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು – ಸೂಕ್ತ ಕ್ರಮಕ್ಕಾಗಿ.
3. ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು -65 – ಸೂಕ್ತ ಕ್ರಮಕ್ಕಾಗಿ.
4. ಸಂಯೋಜಕರು, ಸಾವಯವ ಕೃಷಿ ಸಂಶೋಧನಾ ಸಂಸ್ಥೆ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು.
5. ಸಹಾಯಕ ಕುಲಸಚಿವರು, ಕುಲಸಚಿವರ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು.
6. ಆಪ್ತ ಕಾರ್ಯದರ್ಶಿಗಳು ಕುಲಪತಿಗಳರವರ ಕಛೇರಿ, ಕೃಷಿ ವಿಶ್ವವಿದ್ಯಾನಿಲಯ, ಜಿ.ಕೆವಿಕೆ. ಬೆಂಗಳೂರು-ಮಾಹಿತಿಗಾಗಿ.
7. ಕಛೇರಿ ಕಡತಕ್ಕೆ.

# ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

## ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ

ಜಿಕೆವಿಕೆ, ಬೆಂಗಳೂರು – 560 065

## 2026–27ನೇ ಸಾಲಿನ ದೂರ ಶಿಕ್ಷಣ ಕೋರ್ಸ್‌ಗೆ ಅರ್ಜಿ

ನ್ಯಾಕ್ ಎ+ ಮಾನ್ಯತೆ

**ಅರ್ಜಿ ಸಂಖ್ಯೆ:**

ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ

*ಅರ್ಜಿಯನ್ನು SSLC ಅಂಕಪಟ್ಟಿಯಲ್ಲಿರುವಂತೆ ಕನ್ನಡ ಭಾಷೆಯಲ್ಲಿ ಮಾತ್ರ ಭರ್ತಿ ಮಾಡಬೇಕು*

| | | |
|---|---|---|
| 1 | ನೀವು ಸೇರಬಯಸುವ ಕೋರ್ಸ್‌ನ ಹೆಸರು | |
| 2 | ಅಭ್ಯರ್ಥಿಯ ಹೆಸರು | |
| 3 | ತಂದೆಯ ಹೆಸರು | |
| 4 | ತಾಯಿಯ ಹೆಸರು | |
| 5 | ಹುಟ್ಟಿದ ದಿನಾಂಕ | |
| 6 | ಲಿಂಗ | ಸ್ತ್ರೀ / ಪುರುಷ / ತೃತೀಯ |
| 7 | ವಿವಾಹಿತರೆ ಅಥವಾ ಅವಿವಾಹಿತರೆ? | |
| 8 | ಜಾತಿ/ಪಂಗಡ | |
| 9 | ವಿದ್ಯಾಭ್ಯಾಸದ ಮಟ್ಟ | |
| 10 | ವಿಕಲಚೇತನರೆ? | ಹೌದು / ಇಲ್ಲ |
| 11 | ಮೊಬೈಲ್ ಸಂಖ್ಯೆ (Whatsapp No.) | |
| 12 | ಸಂಪರ್ಕ ವಿಳಾಸ | |
| 13 | ಆಧಾರ್ ಸಂಖ್ಯೆ | |
| 14 | ಕೋರ್ಸ್ ಶುಲ್ಕದ ಡಿ.ಡಿ. ಸಂಖ್ಯೆ ಮತ್ತು ದಿನಾಂಕ | |
| 15 | ಅಧ್ಯಯನ ಕೇಂದ್ರದ ಹೆಸರು | |
| 16 | ವೃತ್ತಿ | ಸರ್ಕಾರಿ ನೌಕರ / ಅರೆ ಸರ್ಕಾರಿ ನೌಕರ / ರೈತ / ನಿರುದ್ಯೋಗಿ / ಇತರೆ |
| 17 | ಸರ್ಕಾರಿ / ಅರೇ ಸರ್ಕಾರಿ ನೌಕರರಾದರೆ ಕೆಳಗಿನ ಮಾಹಿತಿ ತುಂಬಿರಿ | |

| ಸಂಸ್ಥೆಯ ಹೆಸರು | ಉದ್ಯೋಗದ ಹೆಸರು | ಸೇವೆಗೆ ಸೇರಿದ ದಿನಾಂಕ |
|---|---|---|
| | | |

ಈ ಮೇಲ್ಕಂಡ ಅಭ್ಯರ್ಥಿಯು ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನಲ್ಲಿ ಡಿಪ್ಲೊಮಾ / ಸರ್ಟಿಫಿಕೇಟ್ ಕೋರ್ಸ್‌ಗೆ ನೋಂದಾಯಿಸಲು ನಮ್ಮ ಅಭ್ಯಂತರವಿರುವುದಿಲ್ಲ.

**ಮೇಲಾಧಿಕಾರಿಯ ಸಹಿ ಮತ್ತು ಮೊಹರು**

### ಸ್ವಯಂ ದೃಢೀಕರಣ

18. ನಾನು ಮೇಲೆ ತಿಳಿಸಿರುವ ವಿವರಗಳು ಸರಿಯಾಗಿವೆಯೆಂದು ಮತ್ತು ನಿಜವೆಂದು ದೃಢೀಕರಿಸುತ್ತೇನೆ. ಸಲ್ಲಿಸಿದ ಮಾಹಿತಿ ತಪ್ಪು ಎಂದು ಕಂಡುಬಂದಲ್ಲಿ ಕಾನೂನಿನಂತೆ ಕ್ರಮ ಕೈಗೊಳ್ಳಬಹುದು ಹಾಗೂ ವಿಶ್ವವಿದ್ಯಾನಿಲಯದಲ್ಲಿ ಕಾಲ ಕಾಲಕ್ಕೆ ಆಗುವ ಬದಲಾವಣೆಗಳಿಗೆ ಬದ್ಧನಾಗಿರುತ್ತೇನೆಂದು ಘೋಷಿಸುತ್ತೇನೆ.

ಸ್ಥಳ: ____________________

ದಿನಾಂಕ: ____________________

ಸಹಿ: ____________________

(ಅಭ್ಯರ್ಥಿಯ ಸಹಿ)

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ+

# ಸಾವಯವ ಮತ್ತು ನೈಸರ್ಗಿಕ ಕೃಷಿ

## ಎರಡು ವರ್ಷದ ದೂರ ಶಿಕ್ಷಣ ಡಿಪ್ಲೊಮಾ ಕೋರ್ಸ್

ವಿವರಣಾ ಕೈಪಿಡಿ

**ದೂರ ಶಿಕ್ಷಣ ಘಟಕ**
ವಿಸ್ತರಣಾ ನಿರ್ದೇಶನಾಲಯ
ಜಿಕೆವಿಕೆ, ಬೆಂಗಳೂರು-560 065

**2026-27**

# ಪ ರಿ ವಿ ಡಿ


| ಕ್ರಸಂ | ವಿಷಯ | ಪುಟ ಸಂಖ್ಯೆ |
|---|---|---|
| 1 | ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–ಪರಿಚಯ | 1 |
| 2 | ಉದ್ದೇಶಗಳು | 1 |
| 3 | ವಿಶಿಷ್ಟ ಲಕ್ಷಣಗಳು | 1 |
| 4 | ಕೋರ್ಸ್ ವಿವರ | 2 |
| 5 | ಅಧ್ಯಯನ ಕೇಂದ್ರ, ತಾಂತ್ರಿಕ ಸಹಕಾರ, ಪಠ್ಯಕ್ರಮ ಮತ್ತು ನಿರ್ವಹಣೆ | 3 |
| 6 | ಬೋಧನಾ ಮಾಧ್ಯಮ | 3 |
| 7 | ಅರ್ಹತೆ, ಅವಧಿ, ಮತ್ತು ಶುಲ್ಕಗಳ ವಿವರ | 3 |
| 8 | ಪ್ರವೇಶಾರ್ತಿ ಶುಲ್ಕದ ಮಾಹಿತಿ | 3 |
| 9 | ಎರಡು ವರ್ಷದ ಡಿಪ್ಲೊಮಾ ಕೋರ್ಸ್‌ನ ಪೂರ್ಣಗೊಳಿಸಲು ಗರಿಷ್ಠ ಅವಧಿ | 3 |
| 10 | ಸಂಪರ್ಕ ತರಗತಿಗಳು | 4 |
| 11 | ಬೋಧನಾ ವಿಧಾನ | 4 |
| 12 | ಹಾಜರಾತಿ | 5 |
| 13 | ಸಮಾಲೋಚನಾ ಕಾರ್ಯಕ್ರಮ | 5 |
| 14 | ಮೌಲ್ಯಮಾಪನ | 6 |
| 15 | ಪರೀಕ್ಷೆಯಲ್ಲಿ ದುರ್ನಡತೆಗಳು ಮತ್ತು ದುರ್ವ್ಯವಹಾರ | 6 |
| 16 | ಫಲಿತಾಂಶ ಘೋಷಣೆ | 7 |
| 17 | ಅರ್ಜಿ ಪಡೆಯುವ ವಿಧಾನ | 7 |
| 18 | ಅರ್ಜಿ ಜೊತೆಗೆ ಸಲ್ಲಿಸುವ ತಾಳೆ ಪಟ್ಟಿ | 8 |
| 19 | ಅರ್ಜಿ ವಿತರಣೆ ವಿವರ | 8 |
| 20 | ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು | 9 |

## 1. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು–ಪರಿಚಯ

ಕೃಷಿ ವಿಶ್ವವಿದ್ಯಾನಿಲಯವನ್ನು 1964 ರಲ್ಲಿ ಕೃಷಿ ಸಂಬಂಧಿತ ವಿಜ್ಞಾನ ಬೆಳವಣಿಗೆಗಾಗಿ ಸ್ಥಾಪಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು, ದೇಶದ ಕೃಷಿ ಶಿಕ್ಷಣ ಮತ್ತು ಸಂಶೋಧನೆಯ ಪ್ರಮುಖ ಸಂಸ್ಥೆಯಾಗಿದೆ, ಪ್ರಸ್ತುತದಲ್ಲಿ ಕೃಷಿ ಸಂಬಂಧಿತ ವಿಶ್ವವಿದ್ಯಾನಿಲಯಗಳಲ್ಲಿಯೇ 11ನೇ ಮತ್ತು ರಾಜ್ಯ ಮಟ್ಟದಲ್ಲಿ ಪ್ರಥಮ ಸ್ಥಾನದಲ್ಲಿದೆ ಕೃಷಿ ವಿಶ್ವವಿದ್ಯಾನಿಲಯವು, ಬೆಂಗಳೂರು, ರಾಷ್ಟ್ರೀಯ ಮೌಲ್ಯಮಾಪನ ಮತ್ತು ಮಾನ್ಯತಾ ಮಂಡಳಿ (ನ್ಯಾಕ್ NAAC ) ನಿಂದ 2024–25 ರಲ್ಲಿ ಐದು ವರ್ಷಗಳ ಅವಧಿಗೆ A$^+$ ಗ್ರೇಡ್‌ನೊಂದಿಗೆ ಮಾನ್ಯತೆ ಪಡೆದಿದೆ.

ಕೃಷಿ ತಂತ್ರಜ್ಞಾನದ ಹೊಸ ಅವಿಷ್ಕಾರಗಳನ್ನು ದೂರ ಶಿಕ್ಷಣದ ಮೂಲಕ ರಾಜ್ಯದ ಕೃಷಿಕರಿಗೆ ಮುಟ್ಟಿಸುವ ಸಲುವಾಗಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಕೋರ್ಸ್‌ಗಳನ್ನು ಕೃಷಿ ವಿಶ್ವವಿದ್ಯಾನಿಲಯವು ಪ್ರಾರಂಭಿಸಿದೆ. ದೇಶ ಹಾಗೂ ರಾಜ್ಯದಲ್ಲಿ ಹೆಚ್ಚಿನ ಶ್ರಮಿಕ ವರ್ಗವು ಕೃಷಿಯನ್ನೇ ಅವಲಂಬಿಸಿದ್ದು, ಸಾವಯವ ಮತ್ತು ನೈಸರ್ಗಿಕ ಕೃಷಿ ಪದ್ಧತಿಯು ಪರಿಸರ ಸಮತೋಲನವನ್ನು ಕಾಯ್ದುಕೊಳ್ಳಲು, ಮಣ್ಣಿನ ಉತ್ಪಾದಕತೆ, ಫಲವತ್ತತೆಗೆ ಸಹಕಾರಿಯಾಗಿರುವ ಹಿನ್ನೆಲೆಯಲ್ಲಿ ಮತ್ತು ಇತ್ತೀಚೆಗೆ ನಗರ ಪ್ರದೇಶದ ಶಿಕ್ಷಿತ ವರ್ಗದ ಜನರು/ಉದ್ಯಮಿಗಳು ಕೃಷಿ ಬಗ್ಗೆ ಆಸಕ್ತಿ ವಹಿಸುತ್ತಿರುವುದನ್ನು ಮನಗಂಡು, ಸಾವಯವ ಮತ್ತು ನೈಸರ್ಗಿಕ ಕೃಷಿ ಎರಡು ವರ್ಷದ ಡಿಪ್ಲೋಮಾ ಕೋರ್ಸ್‌ನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ ದೂರ ಶಿಕ್ಷಣದಡಿಯಲ್ಲಿ ಪ್ರಸ್ತುತ 2026–27ನೇ ಶೈಕ್ಷಣಿಕ ವರ್ಷದಿಂದಲೇ ಈ ಕೆಳಕಂಡ ಉದ್ದೇಶಗಳೊಂದಿಗೆ ಪ್ರಾರಂಭಿಸಲಾಗಿದೆ.

## 2. ಉದ್ದೇಶಗಳು

- ಸಾವಯವ ಮತ್ತು ನೈಸರ್ಗಿಕ ಕೃಷಿಯನ್ನು ರೈತರಿಗೆ (ಗ್ರಾಮೀಣ ಯುವ ಜನಾಂಗಕ್ಕೆ ಮತ್ತು ಆಸಕ್ತರಿಗೆ) ದೂರ ಶಿಕ್ಷಣದ ಮೂಲಕ ತಲುಪಿಸುವುದು.
- ಗ್ರಾಮೀಣ ಪ್ರದೇಶಗಳಲ್ಲಿ ಸಾವಯವ ಮತ್ತು ನೈಸರ್ಗಿಕ ಕೃಷಿಯ ಬಗ್ಗೆ ಮಾನವ ಸಂಪನ್ಮೂಲ ಅಭಿವೃದ್ಧಿಪಡಿಸುವುದು.
- ಕಾರ್ಯನಿರತ ಉದ್ಯೋಗಿಗಳಿಗೆ ಉನ್ನತ ಕೃಷಿ ಜ್ಞಾನವನ್ನು ಗಳಿಸಿಕೊಳ್ಳಲು ಅವಕಾಶವನ್ನು ಒದಗಿಸುವುದು.
- ಕೃಷಿಯಲ್ಲಿ ದೂರ ಶಿಕ್ಷಣಕ್ಕೆ ಉತ್ತೇಜನ ನೀಡುವುದು

## 3. ವಿಶಿಷ್ಟ ಲಕ್ಷಣಗಳು

ಮುಕ್ತ ಮತ್ತು ದೂರ ಶಿಕ್ಷಣ ಕಲಿಕಾ ವ್ಯವಸ್ಥೆಯು ಅದ್ವಿತೀಯವು ಹಾಗೂ ಸವಾಲುವುಳ್ಳದ್ದು ಆಗಿದೆ. ಏಕೆಂದರೆ ಮುಕ್ತ ಮತ್ತು ದೂರ ಕಲಿಕಾ ಕ್ರಮಕ್ಕೆ ಸೇರ್ಪಡೆಯಾಗಿರುವ ಕಲಿಕಾರ್ಥಿಗಳು ವಿವಿಧ ಬಗೆಯ

ಸಾಮಾಜಿಕ, ಆರ್ಥಿಕ ಹಿನ್ನಲೆಯೊಂದಿಗೆ ಹಾಗೂ ವಿಭಿನ್ನ ಕಲಿಕಾ ಹಿನ್ನಲೆಯನ್ನು ಹೊಂದಿರುವವರಾಗಿರುತ್ತಾರೆ. ಪ್ರಸ್ತುತ ಸಾಂಪ್ರದಾಯಿಕ ವಿಶ್ವವಿದ್ಯಾನಿಲಯ ವ್ಯವಸ್ಥೆಗೆ ಅಭ್ಯರ್ಥಿಗಳ ನೈಜ ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ ಹಾಗೂ ಇಂತಹ ಅಭ್ಯರ್ಥಿಗಳು ಹಲವಾರು ಕಾರಣಗಳಿಂದ ಸಾಂಪ್ರದಾಯಿಕ ಶಿಕ್ಷಣ ವ್ಯವಸ್ಥೆಯಲ್ಲಿ ಶಿಕ್ಷಣ ಮುಂದುವರೆಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ಸಾಂಪ್ರದಾಯಿಕ ಶಿಕ್ಷಣದಿಂದ ವಂಚಿತರಾಗಿರುವ ಅಭ್ಯರ್ಥಿಗಳಿಗೆ ಶಿಕ್ಷಣವನ್ನು ಮುಂದುವರೆಸಲು ದೂರ ಶಿಕ್ಷಣ ವ್ಯವಸ್ಥೆಯಲ್ಲಿ ಅವಕಾಶ ಒದಗಿಸಲಾಗಿದೆ. ಕೃಷಿ ವಿಶ್ವವಿದ್ಯಾನಿಲಯದ ಪ್ರಮುಖ ಧ್ಯೇಯವೆಂದರೆ ಉನ್ನತ ಗುಣಮಟ್ಟದ ಮಾನವ ಸಂಪನ್ಮೂಲವನ್ನು ಸೃಜಿಸುವುದೇ ಆಗಿದೆ. ಹೀಗಾಗಿ ಈ ಕೆಳಕಂಡ ಅಂಶಗಳಿಗೆ ಒತ್ತು ನೀಡಿ ಶಿಕ್ಷಣ ನೀಡಲಾಗುತ್ತಿದೆ.

- ಅನೂಕೂಲಕರ ರೀತಿಯಲ್ಲಿ ಸ್ವತಃ ವ್ಯಾಸಂಗ ಮಾಡುವುದು
- ನವ್ಯ ಪಠ್ಯ ಮಾದರಿ
- ಮುದ್ರಿತ ಮಾರ್ಗದರ್ಶಿ ಒದಗಿಸುವುದು.

## ನೋಡೆಲ್ ವಿಭಾಗ

ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃ.ವಿ.ವಿ., ಜಿ.ಕೆ.ವಿ.ಕೆ., ಬೆಂಗಳೂರು

# 4. ಕೋರ್ಸ್ ವಿವರ

## ಎರಡು ವರ್ಷದ ಸಾವಯವ ಮತ್ತು ನೈಸರ್ಗಿಕ ಕೃಷಿ ಡಿಪ್ಲೊಮಾ ಕೋರ್ಸ್

### ಎರಡು ವರ್ಷದ ಸಾವಯವ ಮತ್ತು ನೈಸರ್ಗಿಕ ಕೃಷಿ ಕೋರ್ಸ್‌ನಲ್ಲಿ ಕಲಿಸಲಾಗುವ ವಿಷಯಗಳು

ಸಾವಯವ ಕೃಷಿ, ಸಾವಯವ ಕೃಷಿ ವಿಧಾನಗಳು, ಸಾವಯವ ಕೃಷಿಯಲ್ಲಿ ಮಣ್ಣು ಮತ್ತು ಪೋಷಕಾಂಶಗಳ ನಿರ್ವಹಣೆ, ಕೃಷಿ ಆಧಾರಿತ ಜೀವನೋಪಾಯ ಚಟುವಟಿಕೆಗಳು, ಸಾವಯವ ಕೃಷಿಯಡಿ ತೋಟಗಾರಿಕೆ ಬೆಳೆಗಳ ಏಕೀಕರಣ, ಸಾವಯವ ಕೃಷಿಯಲ್ಲಿ ಬೆಳೆಗಳ ನಿರ್ವಹಣೆ, ನೈಸರ್ಗಿಕ ಕೃಷಿ, ನೈಸರ್ಗಿಕ ಕೃಷಿ ವಿಧಾನಗಳು, ನೈಸರ್ಗಿಕ ಕೃಷಿಯಲ್ಲಿ ಮಣ್ಣು ಮತ್ತು ಪೋಷಕಾಂಶಗಳ ನಿರ್ವಹಣೆ, ನೈಸರ್ಗಿಕ ಕೃಷಿ ಪದ್ಧತಿಗಳು/ಜೀವನೋಪಾಯ ಚಟುವಟಿಕೆಗಳು, ನೈಸರ್ಗಿಕ ಕೃಷಿಯಡಿ ತೋಟಗಾರಿಕೆ ಬೆಳೆಗಳ ಏಕೀಕರಣ, ನೈಸರ್ಗಿಕ ಕೃಷಿಯಲ್ಲಿ ಬೆಳೆಗಳ ನಿರ್ವಹಣೆ.

## 5. ಅಧ್ಯಯನ ಕೇಂದ್ರ, ತಾಂತ್ರಿಕ ಸಹಕಾರ, ಪಠ್ಯಕ್ರಮ ಮತ್ತು ನಿರ್ವಹಣೆ

**ಸಂಯೋಜಕರು, ಸಾವಯವ ಕೃಷಿ ಸಂಶೋಧನಾ ಸಂಸ್ಥೆ, ಕೃ.ವಿ.ವಿ., ಜಿ.ಕೆ.ವಿ.ಕೆ., ಬೆಂಗಳೂರು-560 065**

## 6. ಬೋಧನಾ ಮಾಧ್ಯಮ

ಕನ್ನಡ

## 7. ಅರ್ಹತೆ, ಅವಧಿ, ಮತ್ತು ಶುಲ್ಕಗಳ ವಿವರ

ವಿಶ್ವವಿದ್ಯಾನಿಲಯವು ನಿಗದಿಪಡಿಸಿದ ಶುಲ್ಕದ ವಿವರ

| ಕೋರ್ಸ್ | ಅರ್ಹತೆ | ಅವಧಿ | ಶುಲ್ಕ (ರೂ.ಗಳಲ್ಲಿ) |
|---|---|---|---|
| ಎರಡು ವರ್ಷದ ಸಾವಯವ ಮತ್ತು ನೈಸರ್ಗಿಕ ಕೃಷಿ ಡಿಪ್ಲೋಮಾ ಕೋರ್ಸ್ | ಹತ್ತನೇ ತರಗತಿ ಉತ್ತೀರ್ಣ / ಅನುತ್ತೀರ್ಣರಾಗಿರಬೇಕು. | 24 ತಿಂಗಳು | 24000=00 |

## 8. ಪ್ರವೇಶಾರ್ತಿ ಶುಲ್ಕದ ಮಾಹಿತಿ

ಎರಡು ವರ್ಷದ ಅವಧಿಯ ಡಿಪ್ಲೋಮಾ ಕೋರ್ಸ್‌ಗೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ನಿಗದಿಪಡಿಸಿರುವಂತೆ **ರೂ. 12,000/- (ರೂಪಾಯಿ ಹನ್ನೆರಡು ಸಾವಿರ ಮಾತ್ರ)** ಒಂದು ವರ್ಷಕ್ಕೆ, ಒಟ್ಟು **ರೂ. 24,000/- (ರೂಪಾಯಿ ಇಪ್ಪತ್ನಾಲ್ಕು ಸಾವಿರ ಮಾತ್ರ)** ಎರಡು ವರ್ಷಕ್ಕೆ ನಿಗದಿಪಡಿಸಲಾಗಿದೆ, ಮತ್ತೆ ಕಾಲಕಾಲಕ್ಕೆ ಬದಲಾವಣೆಗೆ ಒಳಪಟ್ಟಿರುತ್ತದೆ. ಇದನ್ನು ಆಯಾ ಸೆಮಿಸ್ಟರ್‌ನ ಆರಂಭದಲ್ಲಿ ಪಾವತಿ ಮಾಡಬೇಕಾಗಿರುತ್ತದೆ ಅಥವಾ ಈ ಶುಲ್ಕವನ್ನು ಪ್ರತಿ ಸೆಮಿಸ್ಟರ್‌ಗೊಮ್ಮೆ ರೂ. 6000/- (ಆರು ಸಾವಿರದಂತೆ) ನಾಲ್ಕು ಬಾರಿಯೂ ಸಹ ಪಾವತಿ ಮಾಡಬಹುದು.

ಪ್ರತೀ ಸೆಮಿಸ್ಟರ್ / ಒಂದು ವರ್ಷ ಅಥವಾ ಎರಡು ವರ್ಷ ಶುಲ್ಕವನ್ನು ಡಿ.ಡಿ. ಮುಖಾಂತರ Comptroller, UAS, GKVK, Bangalore-560 065 ಇವರ ಹೆಸರಿಗೆ ಬೆಂಗಳೂರಿನಲ್ಲಿ ಸಂದಾಯವಾಗುವಂತೆ ಸಲ್ಲಿಸಬೇಕು.

## 9. ಎರಡು ವರ್ಷದ ಡಿಪ್ಲೊಮಾ ಕೋರ್ಸ್‌ನ ಪೂರ್ಣಗೊಳಿಸಲು ಗರಿಷ್ಠ ಅವಧಿ

ಅಭ್ಯರ್ಥಿಯು ಡಿಪ್ಲೊಮಾ ಕೋರ್ಸ್‌ನ್ನು ಎರಡು ವರ್ಷಗಳು (ನಾಲ್ಕು ಸೆಮಿಸ್ಟರ್‌ಗಳು) ಅವಧಿಯಲ್ಲಿ ಪೂರ್ಣಗೊಳಿಸಬೇಕು. ಆದಾಗ್ಯೂ ಒಬ್ಬ ಅಭ್ಯರ್ಥಿ ಕಾರಣಾಂತರಗಳಿಂದ ಕನಿಷ್ಠ ಅವಧಿಯಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದಿದ್ದಲ್ಲಿ ಅಂತಹವರಿಗೆ ನಿಗದಿತ ಅವಧಿಗಿಂತ ಎರಡು ವರ್ಷಗಳ ಹೆಚ್ಚಿನ

ಸಮಯಾವಕಾಶವನ್ನು ನೀಡಲಾಗುವುದು. ಇದರ ಸಾಮಾನ್ಯ ಸಮೀಕರಣವೆಂದರೆ N+2 ವರ್ಷಗಳು (N= ಶಿಕ್ಷಣ ಕ್ರಮವನ್ನು ಪೂರ್ಣಗೊಳಿಸಲು ನೀಡಿರುವ ಕನಿಷ್ಠ/ಸಾಮಾನ್ಯ ಅವಧಿ). (No. of Years + 2 years extra)

## 10. ಸಂಪರ್ಕ ತರಗತಿಗಳು

ಎರಡು ವರ್ಷದ ಅವಧಿಯ ಕೋರ್ಸ್‌ಗೆ 4 ಸೆಮಿಸ್ಟರ್‌ನಲ್ಲಿ ಮುದ್ರಿತ ಮಾರ್ಗದರ್ಶಿಯಲ್ಲಿ 24 ವಿಷಯಗಳಿರುತ್ತದೆ. ಪ್ರತಿ ಸೆಮಿಸ್ಟರ್‌ನಲ್ಲಿ 6 ಕೋರ್ಸ್‌ಗಳಿದ್ದು ದಿನಕ್ಕೊಂದು ಕೋರ್ಸ್‌ನಂತೆ ಆರು (6) ದಿನಗಳ ಸಂಪರ್ಕ ತರಗತಿಗಳಿರುತ್ತದೆ. ಪ್ರತಿ ಸೆಮಿಸ್ಟರ್‌ಗೆ 18 ಕ್ರೆಡಿಟ್‌ಗಳು ಸೇರಿ ಒಟ್ಟು 72 ಕ್ರೆಡಿಟ್‌ಗಳಿರುತ್ತವೆ. ಈ ಸಂಪರ್ಕ ತರಗತಿಗಳನ್ನು ಕೃಷಿ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ ಸಾವಯವ ಕೃಷಿ ಸಂಶೋಧನಾ ಸಂಸ್ಥೆ, ಜಿ.ಕೆ.ವಿ.ಕೆ. ಯಲ್ಲಿ ನಡೆಸಲಾಗುವುದು. ಪ್ರತಿ ತಂಡದ ಅಭ್ಯರ್ಥಿಗಳಿಗೂ ನುರಿತ ತಜ್ಞರೊಂದಿಗೆ ಮುಖಾಮುಖಿ ವಿಚಾರಗಳನ್ನು ಚರ್ಚೆಮಾಡಿ ಅವರ ಅನುಮಾನಗಳನ್ನು ಪರಿಹರಿಸಿಕೊಳ್ಳಲು ಮತ್ತು ಎಲ್ಲಾ ವಿಚಾರವನ್ನು ಅರ್ಥೈಸಿಕೊಳ್ಳಲು ಅವಕಾಶವಿರುತ್ತದೆ. **ಈ ತರಗತಿಗಳಿಗೆ ಕಡ್ಡಾಯವಾಗಿ ಅಭ್ಯರ್ಥಿಗಳು ತಮ್ಮ ಸ್ವಂತ ಖರ್ಚಿನಲ್ಲಿ ಬಂದು ಹೋಗಬೇಕು. ಈ ಅವಧಿಯಲ್ಲಿ ಯಾವುದೇ ರೀತಿಯ ಉಚಿತ ವಸತಿ/ ಇತರ ಸೌಲಭ್ಯಗಳಿರುವುದಿಲ್ಲ.**

## 11. ಬೋಧನಾ ವಿಧಾನ

ಸಾಂಪ್ರದಾಯಿಕ ವಿಶ್ವವಿದ್ಯಾನಿಲಯಗಳಲ್ಲಿ ಇರುವುದಕ್ಕಿಂತ ಭಿನ್ನವಾದ ಬೋಧನಾ ವಿಧಾನ ನಮ್ಮ ವಿಶ್ವವಿದ್ಯಾನಿಲಯದಲ್ಲಿದೆ. ಈ ಬೋಧನಾ ವ್ಯವಸ್ಥೆ ಅತ್ಯಂತ ಕಲಿಕಾರ್ಥಿ ಆಧಾರಿತವಾಗಿದ್ದು, ಅಭ್ಯರ್ಥಿಯು ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಕ್ರಿಯಾತ್ಮಕವಾಗಿ ಪಾಲ್ಗೊಳ್ಳಲು ಅಗತ್ಯ ಪ್ರೇರಣೆಯನ್ನು ಒದಗಿಸುತ್ತದೆ. ಅಭ್ಯರ್ಥಿಗಳಿಗೆ ಬೋಧನೆಯನ್ನು ವಿವಿಧ ಕ್ರಮಗಳ ಮುಖಾಂತರ ನೀಡಲಾಗುತ್ತದೆ. ಅವುಗಳೆಂದರೆ ಮುದ್ರಿತ ಸಾಮಗ್ರಿ, ಸಮಾಲೋಚನೆ ಕಾರ್ಯದಲ್ಲಿ ಮುಖಾಮುಖಿ ಸಂವಹನ ನಡೆಸಲಾಗುತ್ತದೆ.

### ಬೋಧನಾ ಮಾಧ್ಯಮವು ಈ ಕೆಳಕಂಡ ಕ್ರಮಗಳ ಸಮ್ಮಿಳಿತವಾಗಿದೆ

- ಮುದ್ರಿತ ಸ್ವಯಂ ಕಲಿಕಾ ಸಾಮಾಗ್ರಿ
- ಕಲಿಕಾರ್ಥಿ ಅಧ್ಯಯನ ಕೇಂದ್ರದಲ್ಲಿ ವಿಷಯ ತಜ್ಞರೊಂದಿಗೆ ಮುಖಾಮುಖಿ ಕಾರ್ಯಕ್ರಮ

ವಿವಿಧ ಶಿಕ್ಷಣ ಕ್ರಮದ ಅಗತ್ಯತೆಯನ್ನು ಪೂರೈಸಿಕೊಳ್ಳಲು ಅಧ್ಯಯನ ಸಾಮಗ್ರಿ ಪ್ರಾಥಮಿಕ ಮೂಲದ ಮಾಹಿತಿಯಾಗಿದೆ. ಅಧ್ಯಯನ ಸಾಮಾಗ್ರಿಯನ್ನು ಪ್ರವೇಶಾತಿ ಸಂದರ್ಭದಲ್ಲಿ ನೀಡಲಾಗುವುದು.

ವೈಯಕ್ತಿಕವಾಗಿ ಅಧ್ಯಯನ ಸಾಮಗ್ರಿಯನ್ನು ಪಡೆಯದಿದ್ದ ಅಭ್ಯರ್ಥಿಗಳಿಗೆ ಅಧ್ಯಯನ ಸಾಮಗ್ರಿಯನ್ನು ರವಾನಿಸಲಾಗುವುದು. ಅಧ್ಯಯನ ಸಾಮಗ್ರಿ ಅಭ್ಯರ್ಥಿಗೆ ತಲುಪದೆ/ಅಭ್ಯರ್ಥಿ ಸ್ವೀಕರಿಸದೆ ಹಿಂದಕ್ಕೆ ಬಂದರೆ ನಂತರ ಅಭ್ಯರ್ಥಿಗಳಿಗೆ ವಿತರಿಸಲಾಗುವುದು.

ವಿಶ್ವವಿದ್ಯಾನಿಲಯವು ಅಭ್ಯರ್ಥಿಗಳು ಸ್ವಯಂ ಕಲಿಕಾ ಸಾಮಗ್ರಿಯನ್ನು ಮೌಲ್ಯಮಾಪನ ಮಾಡುವ ವ್ಯವಸ್ಥೆಯನ್ನು ಪರಿಚಯಿಸಿದೆ. ಈ ಉದ್ದೇಶಕ್ಕಾಗಿ ಸ್ವಯಂ ಕಲಿಕಾ ಸಾಮಗ್ರಿಯೊಂದಿಗೆ ಹಿನ್ನುಣಿಕೆ (ಫೀಡ್‌ಬ್ಯಾಕ್) ನಮೂನೆಯನ್ನು ಕಳುಹಿಸಿಕೊಡಲಾಗುವುದು. ಪ್ರತಿಯೊಬ್ಬ ಕಲಿಕಾರ್ಥಿಯು ಕಲಿಕಾ ಸಾಮಗ್ರಿಯ ಗುಣಮಟ್ಟ ಆಧರಿಸಿ ಸೂಚನೆಗಳನ್ನು ಅನುಸರಿಸಿ ಮೌಲ್ಯಮಾಪನ ಮಾಡಿ ಅಧ್ಯಯನ ಕೇಂದ್ರ ಕಚೇರಿ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಬೇಕು.

## 12. ಹಾಜರಾತಿ

- ಪ್ರತಿ ಅಭ್ಯರ್ಥಿಯು ನಾಲ್ಕು ಸೆಮಿಸ್ಟರ್‌ಗಳಲ್ಲಿ ಸಂಪರ್ಕ ತರಗತಿಗೆ ಖಡ್ಡಾಯವಾಗಿ ಹಾಜರಾಗುವುದು ಮತ್ತು ಲಿಖಿತ ಪರೀಕ್ಷೆ ಬರೆಯುವುದು ಖಡ್ಡಾಯವಾಗಿರುತ್ತದೆ.

- ನೋಂದಾಯಿಸಿದ ಅಭ್ಯರ್ಥಿಗಳು ಲಿಖಿತ ಪರೀಕ್ಷೆಗೆ ಹಾಜರಾಗಲು ಸಂಪರ್ಕ ತರಗತಿಗಳಲ್ಲಿ ಶೇ. 80 ರಷ್ಟು ಹಾಜರಾತಿ ಕಡ್ಡಾಯ. ಅಭ್ಯರ್ಥಿಗಳು ಪರೀಕ್ಷೆಗಳಿಗೆ ಹಾಜರಾಗದಿದ್ದಲ್ಲಿ ಮತ್ತು ಅನುತ್ತೀರ್ಣ ಆಗಿದ್ದಲ್ಲಿ ಅಂತಹ ಅಭ್ಯರ್ಥಿಗಳು ರೂ.500/- ಶುಲ್ಕ ಪಾವತಿಸಿ ಮರು ಪರೀಕ್ಷೆಗೆ ಹಾಜರಾಗಬೇಕು.

- ಸಂಪರ್ಕ ತರಗತಿಗಳಿಗೆ ಮತ್ತು ಲಿಖಿತ ಪರೀಕ್ಷೆಗೆ ಹಾಜರಾಗದಿದ್ದವರನ್ನು ಗೈರು ಹಾಜರಿ (Absent) ಎಂದು ಪರಿಗಣಿಸಲಾಗುವುದು.

## 13. ಸಮಾಲೋಚನಾ ಕಾರ್ಯಕ್ರಮ

ದೂರ ಶಿಕ್ಷಣ ಕಾರ್ಯಕ್ರಮಗಳಿಗೆ ವಿಶ್ವವಿದ್ಯಾನಿಲಯವು ಸಮಾಲೋಚನಾ ಕಾರ್ಯಕ್ರಮಗಳನ್ನು ಏರ್ಪಡಿಸುತ್ತದೆ. ಇದು ಕಲಿಕಾರ್ಥಿ ಮತ್ತು ಸಮಾಲೋಚಕರು ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಲು ಅವಕಾಶ ಒದಗಿಸುತ್ತದೆ. ಇಂತಹ ಸಮಾಲೋಚನೆಯ ಉದ್ದೇಶವೆಂದರೆ ಅಭ್ಯರ್ಥಿಗಳಿಗೆ ಎದುರಾಗುವ ಕೆಲವು ಸಮಸ್ಯೆಗಳಿಗೆ ಪರಿಣಿತ ಸಮಾಲೋಚಕರಿಂದ ಸ್ಪಷ್ಟೀಕರಣ ದೊರಕಿಸಿಕೊಡುವುದೇ ಆಗಿದೆ.

ಸಮಾಲೋಚನಾ ಕಾರ್ಯಕ್ರಮವನ್ನು ಆಧಿಸೂಚಿಸಿದ ಕಲಿಕಾರ್ಥಿ ಅಧ್ಯಯನ ಕೇಂದ್ರದಲ್ಲಿ ನಡೆಸಲಾಗುವುದು. ಸಂಯೋಜಕರು, ದೂರ ಶಿಕ್ಷಣ ಘಟಕ, ಬೆಂಗಳೂರು ಇವರು ಅಭ್ಯರ್ಥಿಗಳಿಗೆ ಸಮಾಲೋಚನಾ ಕಾರ್ಯಕ್ರಮದ ದಿನಾಂಕ, ಅವಧಿ ಮತ್ತು ಕೇಂದ್ರದ ಬಗ್ಗೆ ಮಾಹಿತಿಯನ್ನು ಸುತ್ತೋಲೆಯ ಮೂಲಕ ತಿಳಿಸುವರು.

ಸಮಾಲೋಚನಾ ಅಭ್ಯರ್ಥಿಗಳಿಗೆ ವಿಷಯ ವಸ್ತುವನ್ನು ಅಭ್ಯಾಸ ಮಾಡುವಾಗ ಎದುರಾಗುವ ಕ್ಲಿಷ್ಟಕರ ಅಂಶಗಳ ಬಗ್ಗೆ ಹಾಗೂ ಅದನ್ನು ಪರಿಹರಿಸಿಕೊಳ್ಳುವ ಬಗ್ಗೆ ಸಮಾಲೋಚಕರು ಅಗತ್ಯ ಸಹಾಯ ಮಾಡುವರು. ಆದ್ದರಿಂದ, **ಕಲಿಕಾರ್ಥಿಗಳು ಸಮಾಲೋಚನಾ ಕಾರ್ಯಕ್ರಮಕ್ಕೆ ಹೋಗುವುದಕ್ಕೆ ಮುಂಚಿತವಾಗಿ ಸ್ವಯಂ ಕಲಿಕಾ ಸಾಮಗ್ರಿಯನ್ನು ಅಭ್ಯಾಸ ಮಾಡಿ, ಚರ್ಚೆ ಮಾಡಬೇಕಾದ ಅಂಶಗಳನ್ನು ಗುರುತಿಸಿಕೊಂಡು ಹೋಗಬೇಕು.**

## 14. ಮೌಲ್ಯಮಾಪನ

- ಮೌಲ್ಯಮಾಪನವು ದೂರ ಶಿಕ್ಷಣದ ಅವಿಭಾಜ್ಯ ಅಂಗವಾಗಿದೆ, ಇದರ ಉದ್ದೇಶ ಅಧ್ಯಯನ ಸಾಮಾಗ್ರಿಗಳಿಂದ ಅಭ್ಯರ್ಥಿಗಳು ಎಷ್ಟರ ಮಟ್ಟಿಗೆ ತಿಳುವಳಿಕೆ ಮೂಡಿಸಿಕೊಂಡಿದ್ದಾರೆ ಎಂಬುದನ್ನು ತಿಳಿದುಕೊಂಡು ಅಭ್ಯರ್ಥಿಯ ಸಾಧನಾ ಮಟ್ಟವನ್ನು ಅರ್ಥಮಾಡಿಕೊಳ್ಳಲು ಸಹಾಯಕವಾಗಿದೆ. ಈ ಕೋರ್ಸ್‌ಗಳಿಗೆ ನಿಗದಿಪಡಿಸಿರುವ ಮೌಲ್ಯಮಾಪನ ರೀತಿಯನ್ನು ಸಂಪರ್ಕ ತರಗತಿಗಳ ಹಾಜರಾತಿ ಮತ್ತು ಲಿಖಿತ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನಿರ್ಧರಿಸಲಾಗುವುದು.
- ಪ್ರತಿ ವಿಷಯದಲ್ಲಿ 100 ಅಂಕಗಳಿಗೆ ಪರೀಕ್ಷೆ ಬರೆಯಬೇಕು.
- ಶೇ. 80ರಷ್ಟು ಹಾಜರಾತಿ ಇದ್ದು ಯಾವುದಾದರು ವಿಷಯಗಳಲ್ಲಿ (subjects) ಅನುತ್ತೀರ್ಣರಾಗಿದ್ದರೆ (Failed) ಅಂಥವರು ಪ್ರತಿ ವಿಷಯಕ್ಕೆ ರೂ. 100/- ರಂತೆ ಶುಲ್ಕ ಕಟ್ಟಿ ಪರೀಕ್ಷೆ ಬರೆಯಬಹುದು. ಇಂತಹ ಪರೀಕ್ಷೆಗಳು, ಆಯಾ ಅಧ್ಯಯನ ಕೇಂದ್ರಗಳಲ್ಲೇ ನಡೆಸಲಾಗುವುದು.
- ಅಭ್ಯರ್ಥಿಗಳು ಮರುಮೌಲ್ಯಮಾಪನಕ್ಕೆ ಪರೀಕ್ಷೆ ಫಲಿತಾಂಶ ಪ್ರಕಟಿಸಿದ 15 ದಿನಗಳ ಒಳಗೆ ಅರ್ಜಿ ಹಾಕಬಹುದು. ಪ್ರತಿ ವಿಷಯಕ್ಕೆ ರೂ. 500/- ಗಳಂತೆ ಡಿಡಿ/ನಗದು/ಪೋಸ್ಟಲ್ ಆರ್ಡರ್ ಮುಖಾಂತರ Comptroller, UAS, GKVK, Bangalore-560 065 ಇವರ ಹೆಸರಿಗೆ ಸಂದಾಯವಾಗುವಂತೆ ನಿಗದಿತ ನಮೂನೆಯಲ್ಲಿ ನೋಡಲ್ ಕೇಂದ್ರದಲ್ಲಿ ಸಲ್ಲಿಸತಕ್ಕದ್ದು.

## 15. ಪರೀಕ್ಷೆಯಲ್ಲಿ ದುರ್ನಡತೆಗಳು ಮತ್ತು ದುರ್ವ್ಯವಹಾರ

- ನಿಯಂತ್ರಣ ಘಟಕ/ನೋಡಲ್ ಘಟಕ ಮಟ್ಟದಲ್ಲಿ ರಚಿಸಿರುವ ಸಮಿತಿಯು ಪರೀಕ್ಷೆಗಳಲ್ಲಿ ದುರ್ನಡತೆ ಮತ್ತು ದುರಾಚಾರ ಪ್ರಕರಣಗಳು ನಡೆಯದಂತೆ ನೋಡಿಕೊಳ್ಳುವುದು.
- ಪರೀಕ್ಷೆ ವೇಳೆ ನಡೆದ ಅಭ್ಯರ್ಥಿಗಳ ದುರ್ನಡತೆಗಳನ್ನು ಪರಿವೀಕ್ಷಣಕಾರರು ಲಿಖಿತ ರೂಪದಲ್ಲಿ ವಿಸ್ತರಣಾ

ನಿರ್ದೇಶಕರಿಗೆ ತಕ್ಷಣ ವರದಿ ಮಾಡಬೇಕು ಅಂತಹ ಅಭ್ಯರ್ಥಿಗಳನ್ನು ಒಂದು ವರ್ಷದವರೆಗೆ ಪರೀಕ್ಷೆಯಿಂದ ಬಹಿಷ್ಕರಣೆ ಮಾಡಲಾಗುವುದು. ಬಹಿಷ್ಕರಣೆಗೆ ಒಳಗಾದ ಅಭ್ಯರ್ಥಿಗಳು ನಿಯಮಾವಳಿ ಪ್ರಕಾರ N+2 ನಾಲ್ಕು ವರ್ಷಗಳ ಅವಧಿಯ ಒಳಗಡೆ ಪೂರ್ಣಗೊಳಿಸಲು ಕಾಲಾವಕಾಶವಿದೆ.

- ಪ್ರವೇಶಾತಿ/ಪರೀಕ್ಷೆ/ಮೌಲ್ಯಮಾಪನಕ್ಕೆ ಸಂಬಂಧಿಸಿದಂತೆ ನಿರ್ಧರಿಸುವ ಅಧಿಕಾರ ನೋಡಲ್ ವಿಭಾಗಕ್ಕೆ ಇರುತ್ತದೆ.

## 16. ಫಲಿತಾಂಶ ಘೋಷಣೆ

ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪ್ರತಿ ವಿಷಯದಲ್ಲಿ ಕನಿಷ್ಠ 35 ಅಂಕಗಳನ್ನು ಪಡೆಯಲೇಬೇಕು. ಹಾಗೂ ಗಳಿಸಿದ ಅಂಕಗಳ ಆಧಾರದ ಮೇಲೆ ಫಲಿತಾಂಶವನ್ನು ವಿಂಗಡಿಸಿ ಫಲಿತಾಂಶವನ್ನು ಶೇಕಡವಾರುನಲ್ಲಿ ಪ್ರಕಟಿಸಲಾಗುವುದು. ಇದರ ವಿವರಗಳು ಈ ಕೆಳಗಿನಂತಿವೆ

| ಅಂಕಗಳು (ಶೇ.) | (ಶ್ರೇಣಿ) |
|---|---|
| 60 ಮತ್ತು ಮೇಲ್ಪಟ್ಟು | ಪ್ರಥಮ ದರ್ಜೆ |
| 50–59.99 | ದ್ವಿತೀಯ ದರ್ಜೆ |
| 35–49.99 | ಉತ್ತೀರ್ಣ |
| 35 ರ ಕೆಳಪಟ್ಟು | ಅನುತ್ತೀರ್ಣ |

ಯಾವ ಅಭ್ಯರ್ಥಿಗಳು 35ಕ್ಕಿಂತ ಕಡಿಮೆ ಅಂಕಗಳನ್ನು ಪಡೆದಿರುತ್ತಾರೋ ಅವರನ್ನು ಪರೀಕ್ಷೆಯಲ್ಲಿ ಅನುತ್ತೀರ್ಣರೆಂದು ಪರಿಗಣಿಸಲಾಗುತ್ತದೆ. ಅಂತಹ ಅಭ್ಯರ್ಥಿಗಳು ಅನುತ್ತೀರ್ಣರಾದ ವಿಷಯಕ್ಕೆ ಪುನಃ ಪೂರಕ ಪರೀಕ್ಷೆಗೆ ಶುಲ್ಕವನ್ನು ಪ್ರತಿ ವಿಷಯಕ್ಕೆ ರೂ.100/– ರಂತೆ ಪಾವತಿಸಿ ಪುನಃ ಪರೀಕ್ಷೆಗೆ ಹಾಜರಾಗತಕ್ಕದ್ದು.

## 17. ಅರ್ಜಿ ಪಡೆಯುವ ವಿಧಾನ

- ಆಸಕ್ತ ಅಭ್ಯರ್ಥಿಗಳು ಈ ಕೋರ್ಸ್‌ಗೆ ಅರ್ಜಿ ಶುಲ್ಕ ರೂ. 100/– (ರೂ ಒಂದು ನೂರು ಮಾತ್ರ) ಪಾವತಿಸಬೇಕು. ಅರ್ಜಿ ಶುಲ್ಕವನ್ನು ನಗದು ಅಥವಾ ಪೋಸ್ಟಲ್ ಆರ್ಡರ್/ಡಿ.ಡಿ.ಯನ್ನು Comptroller, UAS, Bangalore-560065 ಇವರ ಪರವಾಗಿ ಸಲ್ಲಿಸಿ, ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು–560065 ಇವರಿಂದ ಅರ್ಜಿ ಪಡೆಯ ಬಹುದು (ಡಿ.ಡಿ. / ಪೋಸ್ಟಲ್ ಆರ್ಡರ್ ಹಿಂಭಾಗದಲ್ಲಿ ಅಭ್ಯರ್ಥಿಯ ಹೆಸರನ್ನು ನಮೂದಿಸಬೇಕು).

## 18. ಅರ್ಜಿ ಜೊತೆಗೆ ಸಲ್ಲಿಸುವ ತಾಳೆ ಪಟ್ಟಿ

| ಕ್ರ.ಸಂ. | ವಿವರ | ಲಗತ್ತಿಸಿದೆ | ಲಗತ್ತಿಸಿಲ್ಲ |
|---|---|---|---|
| 1 | ಭರ್ತಿ ಮಾಡಿದ ಅರ್ಜಿ | | |
| 2 | ಎಸ್.ಎಸ್.ಎಲ್.ಸಿ ಉತ್ತೀರ್ಣ / ಅನುತ್ತೀರ್ಣ ದೃಢೀಕೃತ ಪ್ರತಿ | | |
| 3 | ಅಭ್ಯರ್ಥಿ ಉದ್ಯೋಗಿಯಾಗಿದ್ದರೆ (ಸರ್ಕಾರಿ / ಖಾಸಗಿ ನೌಕರಿಯಲ್ಲಿರುವವರು) ಉದ್ಯೋಗದಾತರಿಂದ ಪಡೆದ ನಿರಾಪೇಕ್ಷಣಾ ಪತ್ರದ ಮೂಲ ಪ್ರತಿ | | |
| 4 | ಆಧಾರ್ ಕಾರ್ಡ್‌ನ ದೃಢೀಕೃತ ಪ್ರತಿ | | |
| 5 | ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ (ಎರಡು) | | |
| 6 | ಅರ್ಜಿ ಶುಲ್ಕ ಡಿ.ಡಿ. / ಪೋಸ್ಟಲ್ ಆರ್ಡರ್ ರೂಪದಲ್ಲಿ | | |
| 7 | ಕೋರ್ಸ್ ಶುಲ್ಕ ಡಿ.ಡಿ. / ಪೋಸ್ಟಲ್ ಆರ್ಡರ್ ರೂಪದಲ್ಲಿ | | |

ಸೂಚನೆ: ಜೆರಾಕ್ಸ್ ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಲಗತ್ತಿಸುವುದು

## 19. ಅರ್ಜಿ ವಿತರಣೆ ವಿವರ

| ಕೋರ್ಸ್ | ಅರ್ಜಿ ವಿತರಿಸುವ ದಿನಾಂಕ | ಭರ್ತಿ ಮಾಡಿದ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ |
|---|---|---|
| ಎರಡು ವರ್ಷದ ಸಾವಯವ ಮತ್ತು ನೈಸರ್ಗಿಕ ಕೃಷಿ ಡಿಪ್ಲೊಮಾ | 06-07-2026 | 07-08-2026 |

**ಸೂಚನೆ:- ಒಮ್ಮೆ ಸಲ್ಲಿಸಿದ ಕೋರ್ಸ್ ಶುಲ್ಕವನ್ನು ಯಾವುದೇ ಕಾರಣಕ್ಕೂ ಮರು ಪಾವತಿ ಮಾಡುವುದಿಲ್ಲ**

## ಗಮನಕ್ಕೆ

- ಅರ್ಜಿ ನಮೂನೆ ಕೃ.ವಿ.ವಿ., ಬೆಂಗಳೂರು ಅಧಿಕೃತ ಜಾಲತಾಣದಿಂದ (website) (ಡೌನ್‌ಲೋಡ್ ಮಾಡಿಕೊಳ್ಳಬಹುದು. (http://www.uasbangalore.edu.in)
- ಅಭ್ಯರ್ಥಿಗಳು ವಿಶ್ವವಿದ್ಯಾನಿಲಯದ ದೂರ ಶಿಕ್ಷಣ ಘಟಕದ ಕೇಂದ್ರ ಕಚೇರಿ ಮತ್ತು ಸಾವಯವ ಕೃಷಿ ಸಂಶೋಧನಾ ಸಂಸ್ಥೆಯನ್ನು ಮಾತ್ರ ಸಂಪರ್ಕಿಸಬೇಕು.

## ಪ್ರಮುಖ ದಿನಗಳು

| ಪ್ರವೇಶಾತಿ ಪ್ರಾರಂಭ | 06-07-2026 |
|---|---|
| ಅರ್ಜಿ ಸಲ್ಲಿಕೆಗೆ ಕಡೆಯ ದಿನಾಂಕ | 07-08-2026 |

- ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರಿನ ಕೇಂದ್ರ ಕಚೇರಿ ವಿಸ್ತರಣಾ ನಿರ್ದೇಶನಾಲಯ ಇಲ್ಲಿ ಪ್ರವೇಶ ಅಪೇಕ್ಷಿಸುವ ಅಭ್ಯರ್ಥಿಗಳು ಭರ್ತಿಮಾಡಿದ ಅರ್ಜಿಯನ್ನು, ಸಂಯೋಜಕರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ಜಿಕೆವಿಕೆ, ಬೆಂಗಳೂರು-560065 ಇವರಿಗೆ ಸಲ್ಲಿಸುವುದು.

## ವಿಶೇಷ ಗಮನಕ್ಕೆ

1. ಹೊರರಾಜ್ಯದ ಅಭ್ಯರ್ಥಿಗಳು ಶಿಕ್ಷಣ ಕ್ರಮಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ. ಆದರೆ, ಅವರು ಕರ್ನಾಟಕ ರಾಜ್ಯದೊಳಗಿನ ಪ್ರಾದೇಶಿಕ ಕೇಂದ್ರ / ಕೇಂದ್ರಸ್ಥಾನದಲ್ಲಿ ಪ್ರವೇಶಾತಿಯನ್ನು ಪಡೆಯಬೇಕು ಮತ್ತು ಕನ್ನಡ ಓದಲು ಹಾಗೂ ಬರೆಯಲು ಬಲ್ಲವರಾಗಿರಬೇಕು.
2. ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ಉತ್ತಮ ಸಂಪನ್ಮೂಲ ವ್ಯಕ್ತಿಗಳನ್ನು ಸೃಜಿಸುತ್ತದೆ.

## 20. ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. ಅಭ್ಯರ್ಥಿಗಳು ತಮ್ಮ ಅರ್ಹತೆಯನ್ನು ಖಚಿತಪಡಿಸಿಕೊಂಡ ನಂತರವೇ ಅರ್ಜಿಯನ್ನು ಸಲ್ಲಿಸಬೇಕು
2. ಅರ್ಜಿಯನ್ನು ಭರ್ತಿ ಮಾಡುವ ಮೊದಲು ಅಭ್ಯರ್ಥಿಗಳು ವಿವರಣಾ ಪುಸ್ತಕದಲ್ಲಿರುವ ಸೂಚನೆಗಳನ್ನು ಜಾಗರೂಕತೆಯಿಂದ ಓದಬೇಕು
3. ವಿಶ್ವವಿದ್ಯಾನಿಲಯದ ಜಾಲತಾಣ/ವೆಬ್‌ಸೈಟ್‌ನಿಂದ ಅರ್ಜಿ ನಮೂನೆಯನ್ನು ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರಿನ ಅಧಿಕೃತ ಜಾಲತಾಣದಿಂದ (http://www.uasbangalore.edu.in) ಡೌನ್‌ಲೋಡ್ ಮಾಡಿಕೊಂಡು, ಭರ್ತಿ ಮಾಡಿದ ಅರ್ಜಿ ಜೊತೆಯಲ್ಲಿ ಅರ್ಜಿ ಶುಲ್ಕ ಮತ್ತು ಕೋರ್ಸ್ ಶುಲ್ಕದ ಡಿ.ಡಿ.ಯನ್ನು ಲಗತ್ತಿಸಬೇಕು.
4. **ಅಭ್ಯರ್ಥಿಯ ವಾಟ್ಸಪ್ ಸಂಖ್ಯೆಯನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸಬೇಕು.**
5. ಅರ್ಜಿಯೊಂದಿಗೆ ಈ ಕೆಳಕಂಡ ದೃಢೀಕೃತ (Attested) ದಾಖಲಾತಿಗಳನ್ನು ಸಲ್ಲಿಸಬೇಕು
   - ಎಸ್.ಎಸ್.ಎಲ್.ಸಿ. ಉತ್ತೀರ್ಣ / ಅನುತ್ತೀರ್ಣ ಅಂಕಪಟ್ಟಿ
   - ಜಾತಿ ಮತ್ತು ಆದಾಯ ಪ್ರಮಾಣ ಪತ್ರ
   - ಆಧಾರ್ ಕಾರ್ಡ್
   - ಎರಡು ಪಾಸ್ ಪೋರ್ಟ್ ಅಳತೆಯ Photos ಅರ್ಜಿಯ ಜೊತೆ ಲಗತ್ತಿಸುವುದು
   - ವಿಕಲಚೇತನರಾಗಿದ್ದರೆ ದೃಢೀಕೃತ ದಾಖಲಾತಿಯನ್ನು ಲಗತ್ತಿಸುವುದು
6. ಭರ್ತಿ ಮಾಡಿದ ಅರ್ಜಿಯನ್ನು ಕೋರ್ಸ್ ಶುಲ್ಕದ ಡಿಮಾಂಡ್ ಡ್ರಾಫ್ಟ್‌ನೊಂದಿಗೆ ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಕೃಷಿ ವಿಶ್ವವಿದ್ಯಾನಿಲಯ, ಜಿಕೆವಿಕೆ, ಬೆಂಗಳೂರು–560065 ರವರಿಗೆ ಸಲ್ಲಿಸುವುದು.
7. ವಿಶ್ವವಿದ್ಯಾನಿಲಯದ ಅನುಮೋದನೆ ನಂತರವೇ ಪ್ರವೇಶಾತಿಯು ಸಂಪೂರ್ಣಗೊಳ್ಳುತ್ತದೆ
8. ಅಭ್ಯರ್ಥಿಗಳು ಕಾಲಕಾಲಕ್ಕೆ ವಿಶ್ವವಿದ್ಯಾನಿಲಯವು ಹೊರಡಿಸುವ ನಿಯಮ ನಿಬಂಧನೆಗಳನ್ನು ಪಾಲಿಸತಕ್ಕದ್ದು
9. ಅಭ್ಯರ್ಥಿಯು ತನ್ನ ವಯಸ್ಸು / ವಿದ್ಯಾರ್ಹತೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ನೀಡಿದರೆ ಅಥವಾ ಯಾವುದಾದರೂ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷಣ ಕ್ರಮದಿಂದ ಹಾಗೂ ನೋಂದಣಿಯಿಂದ ಹೊರಗಿಡಲಾಗುವುದು ಹಾಗೂ ಕಾನೂನು ಪ್ರಕಾರ ಶಿಸ್ತಿನ ಕ್ರಮ ಕೈಗೊಳ್ಳಲಾಗುವುದು

10. ಅಪೂರ್ಣ ಅರ್ಜಿಗಳನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸಲಾಗುವುದು

11. ಎಲ್ಲಾ ನ್ಯಾಯ ವ್ಯಾಜ್ಯಗಳು ಬೆಂಗಳೂರು ನಗರ ನ್ಯಾಯಲಯಗಳ ವ್ಯಾಪ್ತಿಗೆ ಮಾತ್ರ ಬರುತ್ತದೆ

12. ಅಭ್ಯರ್ಥಿಯು ತನ್ನ ಅರ್ಜಿಯಲ್ಲಿ ಒದಗಿಸಿರುವ ಮಾಹಿತಿ ಮತ್ತು ವಿವರಗಳೇ ಅಂತಿಮವಾದುದೆಂದು ಪರಿಗಣಿಸಲಾಗುವುದು.

13. ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಸಲ್ಲಿಸುವ ಮೊದಲು ಅಭ್ಯರ್ಥಿಯು ಉಲ್ಲೇಖನಕ್ಕೆ / ಅಥವಾ ಇತರೆ ಲಿಖಿತ ವ್ಯವಹಾರಕ್ಕೆ ಅರ್ಜಿ ನಮೂನೆಯ ಜೆರಾಕ್ಸ್ ಪ್ರತಿಯನ್ನು ತಮ್ಮಲ್ಲಿ ಹೊಂದಿರತಕ್ಕದ್ದು

14. ಸರ್ಕಾರಿ / ಖಾಸಗಿ ನೌಕರಿಯಲ್ಲಿರುವವರು ಅರ್ಜಿಗಳನ್ನು ತಮ್ಮ ಮೇಲಾಧಿಕಾರಿಗಳ ಮುಖಾಂತರ ಕಳುಹಿಸುವುದು ಕಡ್ಡಾಯವಾಗಿರುತ್ತದೆ

15. ಆಧಾರ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆದು ಒಂದು ದೃಢೀಕೃತ ಪ್ರತಿಯನ್ನು ಲಗತ್ತಿಸಬೇಕು

16. ಅಭ್ಯರ್ಥಿಗಳು ಕನ್ನಡದಲ್ಲಿ ಓದಲು ಮತ್ತು ಬರೆಯಲು ಬರುವಂತಿರಬೇಕು

## ವಿಳಾಸ ಬದಲಾವಣೆ

ಪ್ರವೇಶಾತಿ ಸಮಯದಲ್ಲಿ ಅಭ್ಯರ್ಥಿಯು ನೀಡಿದ್ದ ವಿಳಾಸವನ್ನು ಬದಲಾವಣೆ ಮಾಡಿಕೊಳ್ಳಬೇಕಾದ ಸಂದರ್ಭದಲ್ಲಿ ಅಭ್ಯರ್ಥಿಯೇ **ಸಂಯೋಜಕರು ಮತ್ತು ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ರೈತ ತರಬೇತಿ ಸಂಸ್ಥೆ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು–560065** ರವರಿಗೆ ಪತ್ರ ಬರೆದು ತಿಳಿಸಬೇಕು.

## ಹೆಸರು ಬದಲಾವಣೆ

ವ್ಯಾಸಾಂಗದ ಅವಧಿಯಲ್ಲಿ ಅಭ್ಯರ್ಥಿಯು ಹೆಸರು ಬದಲಾವಣೆ ಮಾಡಿಕೊಳ್ಳುವ ಸಂಬಂಧ ಈ ಕೆಳಕಂಡ ದಾಖಲಾತಿಗಳನ್ನು ಸಲ್ಲಿಸಬೇಕು.

- ಹೆಸರು ಬದಲಾವಣೆ ಅರ್ಜಿ
- ಹೆಸರು ಬದಲಾವಣೆ ಸಂಬಂಧ ನ್ಯಾಯಾಲಯದಿಂದ ಪಡೆದಿರುವ ಜಡ್ಜ್‌ಮೆಂಟ್ (ಡಿಕ್ರಿ) ಛಾಯಾ ಪ್ರತಿ.
- ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ 2 ಭಾವಚಿತ್ರಗಳು
- ಶುಲ್ಕ ಪಾವತಿಸಿದ ವಿವರಗಳು
- ಎಸ್.ಎಸ್.ಎಲ್.ಸಿ ಅಂಕಪಟ್ಟಿ ಛಾಯಾಪ್ರತಿ
- ಅಭ್ಯರ್ಥಿ ಗುರುತಿನ ಪತ್ರದ (ಐ.ಡಿ.ಕಾರ್ಡ್) ಧೃಡೀಕರಣ ಛಾಯಾ ಪ್ರತಿ.
- ಪ್ರವೇಶಾತಿ ಶುಲ್ಕ ಪಾವತಿಸಿದ ವಿವರದ ದೃಢೀಕೃತ ಛಾಯಾ ಪ್ರತಿ.

- ವಾರ್ತಾ ಪತ್ರಿಕೆಯಲ್ಲಿ ನೀಡಿದ ಜಾಹಿರಾತು ಪ್ರತಿ.

## ನಕಲು ಗುರುತಿನ ಪತ್ರ ನವೀಕರಣ

ಒಂದು ವೇಳೆ ಮೂಲ ಗುರುತಿನ ಕಾರ್ಡ್ ಕಳೆದು ಹೋದಲ್ಲಿ ರೂ.100/–ಗಳನ್ನು ಪಾವತಿಸಿ ನಕಲು ಗುರುತಿನ ಕಾರ್ಡ್ ಪಡೆಯುವುದು. ನಕಲು ಗುರುತಿನ ಕಾರ್ಡ್ ಪಡೆಯಲು

1. ದೃಢೀಕರಿಸಿದ ಅಂಕಪಟ್ಟಿಯ ಛಾಯಾಪ್ರತಿ ಮತ್ತು ಭಾವಚಿತ್ರ, ದೃಢೀಕರಿಸಿದ ಆಧಾರ್ ಕಾರ್ಡ್ ಅರ್ಜಿಯ ಜೊತೆ ಲಗತ್ತಿಸಬೇಕು.
2. ಸಂಯೋಜಕರು/ಮುಖ್ಯಸ್ಥರು, ದೂರ ಶಿಕ್ಷಣ ಘಟಕ, ವಿಸ್ತರಣಾ ನಿರ್ದೇಶನಾಲಯ, ಜಿಕೆವಿಕೆ, ಬೆಂಗಳೂರು – 560 065, ಇವರಿಗೆ ಅಭ್ಯರ್ಥಿ ಪತ್ರ ಬರೆಯಬೇಕು.